ಓ ಎಸ್ ನಂ.109/2023

ಪಿ.ಡಬ್ಲ್ಯೂ-1 ಅಪ್ಪಾಜಿ ತಂದೆ ಚಿದಾನಂದ ಹಿರೆಮಠ

(ಇಂದು ದಿನಾಂಕಃ **28-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಶ್ರೀಮತಿ ಎ ಟಿ ಡಿ ವಕೀಲರಿಂದ.

ನಮ್ಮ ತಂದೆ ಚಿದಾನಂದರವರು ತಮ್ಮ ಪಾಲಿಗೆ ಬಂದ ಸರ್ವೆ ನಂಬರ ೫೫ ರಲ್ಲಿ ೮ ಎಕರೆ ೩೨ ಗುಂಟೆ ಜಮೀನಿನಲ್ಲಿ ೪ ಎಕರೆ ೩೪ ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಕೂಡಿ ಇದ್ದಾಗಲೆ ಅಂದರೆ ನಮ್ಮ ಅತ್ತೆಯಂದಿರು ಕೂಡಿ ಇದ್ದಾಗಲೆ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ಅತ್ತೆಯಂದಿರ ಮದುವೆ ಆ ಸಮಯದಲ್ಲಿ ಆಗಿತ್ತು. ಸಾಕ್ಷಿಯು ನಮ್ಮ ಅತ್ತೆಯಂದಿರ ಮಕ್ಕಳ ಮದುವೆಗೆ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ಅತ್ತೆ ಕಸ್ತೂರಿಯಬಾಯಿಯ ಗಂಡ ನಾನು ಚಿಕ್ಕವನಿದ್ದಾಗಲೆ ಮೃತರಾಗಿರುತ್ತಾರೆ. ಅವರಿಗೆ ಗಂಡನ ಮನೆಯ ಆಸ್ತಿ ಇರಲಿಲ್ಲ ಅವರು ಗಂಡನನ್ನು ಬಿಟ್ಟು ಬಂದಿದ್ದರು. ಕಸ್ತೂರಿಬಾಯಿರವರಿಗೆ ಒಬ್ಬಳೆ ಮಗಳು ಇರುತ್ತಾಳೆ. ೨೦೦೭-೦೮ ರಲ್ಲಿ ನಾನು ಚಿಕ್ಕವನಿದ್ದೆ. ನಾನು ೨೦೦೩ ರಲ್ಲಿ ಜನಿಸಿರುತ್ತೇನೆ.

೨. ಖರೀದಿ ಪತ್ರದಲ್ಲಿ ನಮ್ಮ ತಂದೆ ಮಾತ್ರ ಮಾರಾಟ ಮಾಡಿರುವುದು ನಮೂದು ಇದೆ ಎಂದರೆ ಸರಿ. ನಮ್ಮ ತಂದೆ ಬೇರೆಯಾದ ಮೇಲೆ ತಮ್ಮ ಪಾಲಿಗೆ ಬಂದ ಜಮೀನನ್ನು ಮಾರಾಟ ಮಾಡಿದ್ದರೂ ಸಹ ಮತ್ತು ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ ೫೪ ರಲ್ಲಿ ನಮ್ಮ ತಂದೆ ತಮ್ಮ ಪಾಲಿಗೆ ಬಂದ ೧ ಎಕರೆ ೬ ಗುಂಟೆ ಜಮೀನೂ ಕೂಡಾ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ ೫೪/೧ ರಲ್ಲೂ ಕೂಡಾ ನಮ್ಮ ತಂದೆ ತಮ್ಮ ಪಾಲಿಗೆ ಬಂದ

೩ ಎಕರೆ ೨೫ ಗುಂಟೆ ಜಮೀನೂ ಕೂಡಾ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ ೫೫/೧ ರಲ್ಲಿ ೪ ಎಕರೆ ೩ ಗುಂಟೆ ತಮ್ಮ ಪಾಲಿಗೆ ಬಂದ ಜಮೀನನ್ನೂ ಕೂಡಾ ನಮ್ಮ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ೨೦೧೧-೧೨ ರಲ್ಲಿ ಸರ್ವೆ ನಂಬರ ೫೫/೧ ರಲ್ಲಿ ೨ ಎಕರೆ ೩ ಗುಂಟೆ ಜಮೀನನ್ನೂ ಕೂಡಾ ನಮ್ಮ ತಂದೆ ತಮ್ಮ ಪಾಲಿಗೆ ಬಂದಿದ್ದರಿಂದ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

೩. ಸರ್ವೆ ನಂಬರ ೫೪/೫ ರಲ್ಲಿ ೨ ಎಕರೆ ೨೩ ಗುಂಟೆ ಜಮೀನನ್ನು ನಮ್ಮ ದೊಡ್ಡಪ್ಪನಾದ ಸದಾನಂದರವರು ತಮ್ಮ ಪಾಲಿಗೆ ಬಂದಿದ್ದರಿಂದ ಅವರೂ ಕೂಡಾ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ ೫೪/೨ ರಲ್ಲಿ ೧೪ ಗುಂಟೆ ಜಮೀನನ್ನೂ ಕೂಡಾ ನಮ್ಮ ದೊಡ್ಡಪ್ಪ ಸದಾನಂದ ತಮ್ಮ ಪಾಲಿಗೆ ಬಂದಿದ್ದರಿಂದ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ ೫೪/೨ ರಲ್ಲಿ ೩ ಎಕರೆ ೨೦ ಗುಂಟೆ ಜಮೀನನ್ನೂ ಕೂಡಾ ನಮ್ಮ ದೊಡ್ಡಪ್ಪ ತಮ್ಮ ಪಾಲಿಗೆ ಬಂದಿದ್ದರಿಂದ ಅದನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲರೂ ತಮ್ಮ-ತಮ್ಮಲ್ಲಿ ಪಾಲು ಮಾಡಿಕೊಂಡು ತಮ್ಮ-ತಮ್ಮ ಪಾಲಿಗೆ ಬಂದ ಜಮೀನನ್ನು ಮಾರಾಟ ಮಾಡಿಕೊಂಡಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ಅತ್ತೆಯವರಿಗೆ ಮೃತ್ಯುಪತ್ರದ ಮೂಲಕ ಹೋಗಿರುತ್ತವೆ ಎಂದರೆ ಸಾಕ್ಷಿಯು ನಮ್ಮ ಅಜ್ಜಿ ನಮ್ಮ ತಂದೆಗೆ ಆಸ್ತಿ ಮಾಡುತ್ತೇನೆ ಎಂದು ಹೇಳಿದ್ದರು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ನಮ್ಮ ಒಬ್ಬ ಅತ್ತೆ ಗಂಡನನ್ನು ಬಿಟ್ಟು ಬಂದಿದ್ದರಿಂದ ಅವರು ಸಾಯುವವರೆಗೆ ಅವರಿಗೆ ಮತ್ತು ಅವರ ನಂತರ ನಮ್ಮ ತಂದೆಗೆ ಆಸ್ತಿ ನೀಡುತ್ತೇನೆ ಎಂದು ಆಸ್ತಿ ಹೋಗಬೇಕೆಂದು ಹೇಳಿದ್ದರು ಎನ್ನುತ್ತಾರೆ. ಆ ರೀತಿ ನಮ್ಮ ಅಜ್ಜಿ ಯಾವುದೇ ದಾಖಲೆ

ಬರೆದುಕೊಟ್ಟಿರುವುದಿಲ್ಲ. ೨೦೦೭-೦೮ ರಲ್ಲಿ ನಮ್ಮ ತಂದೆ ಮತ್ತು ಅವರ ಸಹೋದರರ ನಡುವೆ ಪಾಲು ಆಗಿ ನಮ್ಮ ತಂದೆ ತಮ್ಮ ಪಾಲಿಗೆ ಬಂದ ಆಸ್ತಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಅಜ್ಜಿಯೇ ನಮ್ಮ ಅತ್ತೆಯಂದಿರಿಗೆ ಮೃತ್ಯುಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಅಜ್ಜಿಗೆ ತಿಳಿಯುತ್ತಿರಲಿಲ್ಲ, ಅವರನ್ನು ಆಸ್ಪತ್ರೆಗೆ ಎಂದು ಕರೆದುಕೊಂಡು ಹೋಗಿ ಸಹಿ ಪಡೆದಿರುತ್ತಾರೆ ಎನ್ನುತ್ತಾರೆ.

೪. ಮೃತ್ಯಪತ್ರದ ಸಮಯದಲ್ಲಿ ನಾನು ಮತ್ತು ನಮ್ಮ ತಂದೆ ಊರಿನಲ್ಲಿಯೇ ವಾಸವಿದ್ದೇವು ಎಂದರೆ ಸರಿ. ಮೃತ್ಯುಪತ್ರವನ್ನು ಮಾಡುವುದಕ್ಕೆ ನಾವು ಯಾವುದೇ ತಕರಾರರನ್ನು ಮಾಡಿಲ್ಲ ಎಂದರೆ ಸಾಕ್ಷಿಯು ಅದು ನಮಗೆ ಗೊತ್ತೇ ಇರಲಿಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ನಮ್ಮ ಅತ್ತೆಯರು ನಮ್ಮ ಅಜ್ಜಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಬರುವುದು ಮಾಡುತ್ತಿದ್ದರು ಎನ್ನುತ್ತಾರೆ. ನಮ್ಮ ಅಜ್ಜಿಯನ್ನು ನಮ್ಮ ಅತ್ತೆಯಂದಿರು ಆರೈಕೆ ಮಾಡಿದ್ದರಿಂದ ಅವರಿಗೆ ಮೃತ್ಯುಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಾವು ಕೂಡಾ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೇವು ಎನ್ನುತ್ತಾರೆ. ನಮ್ಮ ಅಜ್ಜಿಯನ್ನು ಅವರ ಗಂಡು ಮಕ್ಕಳು ನೋಡಿಕೊಳ್ಳದ ಕಾರಣ ಮತ್ತು ಹೆಣ್ಣುಮಕ್ಕಳು ನೋಡಿದ್ದರಿಂದ ನಮ್ಮ ಅಜ್ಜಿ ಹೆಣ್ಣುಮಕ್ಕಳಿಗೆ ಆಸ್ತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಅಜ್ಜಿ ಯಾವುದೇ ಒತ್ತಾಯವಿಲ್ಲದೆ ಮೃತ್ಯುಪತ್ರ ಮಾಡಿ ಆಸ್ತಿ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಅವರ ಸಹೋದರರ ನಡುವೆ ಎಲ್ಲಾ ಆಸ್ತಿ ಪಾಲು ಆಗಿದ್ದರೂ ಸಹ ನಾನು ಒಂದು ಸುಳ್ಳು ಕೇಸನ್ನು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ಧೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ಧೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.